ಶ್ರೀ ಸಿದ್ಧರಾಮಯ್ಯ (ಮಾನ್ಯ ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಪ್ರಿಲಿಮಿನರಿ ನೋಟಿಫಿಕೇಶನ್ ಹೊರಡಿಸಿ ಜಿಲ್ಲೆ ಮಾಡುವುದರ ಬಗ್ಗೆ ಸಾರ್ವಜನಿಕರಿಂದ ಮತ್ತು ಸಂಬಂಧಪಟ್ಟವರಿಂದ ಅಬ್ಜೆಕ್ಷನ್ಸ್ ಕೂಡ ಎಲ್ಲಾ ಕಾಲಫಾರ್ ಮಾಡಿದ್ದೇವೆ. ಅಬ್ಜೆಕ್ಷನ್‌ಗಳನ್ನೆಲ್ಲಾ ನೋಡಿದ ಮೇಲೆ ಅಂತಿಮವಾದ ಅಧಿಸೂಚನೆ ಆಗಿದೆ ಎಂದು ಹೇಳಿ ನನಗೆ ಬಂದಿರುವ ಮಾಹಿತಿ. ನಾನು ಖಚಿತವಾದಂತಹ ಮಾಹಿತಿಯನ್ನು ತರಿಸಿ ಆ ಮೇಲೆ ಉತ್ತರ ಕೊಡುತ್ತೇನೆ.

ಸ್ವಾತಂತ್ಯೋಧರಿಗೆ ಮಾಸಾಶನದಲ್ಲಿ ಹೆಚ್ಚಳ

ಶ್ರೀ ಡಿ.ಆರ್. ಪಾಟೀಲ್ (ಧಾರವಾಡ ಗ್ರಾಮಾಂತರ) : ಮಾನ್ಯ ಅಧ್ಯಕ್ಷರೆ, ರಾಜ್ಯ ಸರ್ಕಾರ ಸ್ವಾತಂತ್ರ ಯೋಧರಿಗೆ ಕೊಡುವಂತಹ ಮಾಸಾಶನವನ್ನು ಹೆಚ್ಚಿಗೆ ಮಾಡುತ್ತೇವೆ ಎನ್ನುವಂತಹ ಭರವಸೆಯನ್ನು ಕೊಟ್ಟಿತ್ತು. ಇನ್ನೂ ಹೆಚ್ಚಿಗೆ ಮಾಡಿಲ್ಲ. ಅದಕ್ಕೆ ಅದನ್ನು ಆಗಸ್ಟ್ 15 ರೊಳಗೆ ಹೆಚ್ಚು ಮಾಡುವಂತಹ ಕೆಲಸವನ್ನು ಮಾಡಬೇಕು. ಆಮೇಲೆ ಸಾರಿಗೆ ಸಚಿವರು ಇವರಿಗೆ ಬಸ್ ಪಾಸ್‌ನ್ನು ಒಬ್ಬರಿಗೇ ಕೊಟ್ಟಿದ್ದಾರೆ. ಬಹುತೇಕ ಸ್ವಾತಂತ್ಯ ಯೋಧರು ವಯಸ್ಸಾದವರು ಇದ್ದಾರೆ. ಒಬ್ಬರ ಜೊತೆಗೆ ಇನ್ನೊಬ್ಬ ಸಹಾಯಕರಿಗೂ ಅವಕಾಶ ಕಲ್ಪಿಸಿ ಕೊಟ್ಟರೆ ಹೆಚ್ಚು ಅನುಕೂಲ ಆಗುತ್ತದೆ.

ಶ್ರೀ ಸಿದ್ಧರಾಮಯ್ಯ : ಈ ವರ್ಷ 1997-98ರ ಬಜೆಟ್‌ನಲ್ಲಿ 500 ರೂಪಾಯಿ ಮಾಸಾಶನ ಇದ್ದುದನ್ನು 750 ರೂಪಾಯಿ ಮಾಸಾಶನ ಕೊಡಬೇಕು ಎಂದು ತೀರ್ಮಾನ ಮಾಡಿದ್ದೇವೆ. ಅದನ್ನು ಈ ಆಗಸ್ಟ್ 15 ಕ್ಕೆ ಜಾರಿಗೆ ಕೊಡಲಾಗುತ್ತದೆ.

ಅಧ್ಯಕ್ಷರು : ಗುಡ್ ನ್ಯೂಸ್.

ಶ್ರೀ ಪಿ.ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು) : ವಯಸ್ಸಾಗಿರತಕ್ಕವರು ಅವರ ಜೊತೆಯಲ್ಲಿ ಇನ್ನೊಬ್ಬರು ಹೋಗಬೇಕು ಎಂದು ಈಗಾಗಲೇ ಕೆಎಸ್‌ಆರ್‌ಟಿಸಿ ಮತ್ತು ಸರ್ಕಾರದಿಂದ ಒಪ್ಪಿಗೆ ಕೊಟ್ಟು ಸಂಬಂಧಪಟ್ಟ ಸರ್ಕಾರದ ಆಜ್ಞೆಯನ್ನೂ ಸಹ ಹೊರಡಿಸಿದ್ದೇವೆ.

ಹುಬ್ಬಳ್ಳಿ ಮಹಾನಗರದ ಕಿಮ್ಸ್ ಆಸ್ಪತ್ರೆಯ ನೌಕರರಲ್ಲಿರುವ ಗೊಂದಲ.

ಶ್ರೀ ಜಗದೀಶ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ) : ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ ಮಹಾ ನಗರದ ಕಿಮ್ಸ್ ಆಸ್ಪತ್ರೆಯ ನೌಕರ ವರ್ಗವು ಕಳೆದ ಒಂದು ವಾರದಿಂದ ಧರಣಿ ಸತ್ಯಾಗ್ರಹ ಮಾಡುತ್ತಿದ್ದಾರೆ ತಮ್ಮ ಬೇಡಿಕೆಯ ಈಡೇರಿಕೆಗಾಗಿ. ಅವರಿಗೆ ಮೊದಲು ಕೆಎಂಸಿ ಇತ್ತು, ಕೆಎಂಸಿ, ಕಿಮ್ಸ್ ಆಗಿ ಸ್ವಾಯತ್ತ ಸಂಸ್ಥೆ ಆದ ನಂತರ ಅಲ್ಲಿದ್ದಂತಹ ನೌಕರರಿಗೆ ತಮ್ಮ ಸೇವಾ ಭದ್ರತೆಯ ಬಗ್ಗೆ ಗೊಂದಲ ಉಂಟಾಗಿದೆ. ಮತ್ತು ಇಲ್ಲಿಯವರೆಗೆ ಸ್ವಾಯತ್ತ ಸಂಸ್ಥೆಯಾಗಿ ಒಂದು ವರ್ಷ ಆದ ನಂತರವೂ ಸಹ ಅವರ ಸಂಬಳ ಟ್ರೆಜರಿ ಮುಖಾಂತರ ಆಗುತ್ತಿತ್ತು, ಬಟವಾಡೆ ಆಗುತ್ತಿತ್ತು. ಆದರೆ ಈಗ ನಿರ್ದೇಶಕರು ತಾವೇ ತಮ್ಮ ಹತೋಟಿಗೆ ಕೊಡುತ್ತೇವೆ ಎಂದು ಹೇಳಿದ್ದರ ಬಗ್ಗೆ ಸೇವಾ ಗೊಂದಲ ಉಂಟಾಗಿ ಇವತ್ತು ನೌಕರರ ವರ್ಗ ಸತ್ಯಾಗ್ರಹ ಮಾಡುತ್ತಿದ್ದಾರೆ. ಅದರಿಂದ ಕಿಮ್ಸ ಆಸ್ಪತ್ರೆಯ ರೋಗಿಗಳಿಗೂ ಅನಾನುಕೂಲ ಆಗಿದೆ. ಮತ್ತು ನೌಕರ

ವರ್ಗದಲ್ಲಿ ಏನು ಗೊಂದಲ ಇದೆ, ಅವರ ಬೇಡಿಕೆಗಳು ನ್ಯಾಯವಾಗಿದೆ. ಅದಕ್ಕೆ ಸರ್ಕಾರ ಅವರ ಒಂದು ನ್ಯಾಯಯುತ ಬೇಡಿಕೆಯನ್ನು ಈಡೇರಿಸಲು ತಕ್ಷಣ ಕ್ರಮ ಕೈಗೊಳ್ಳಬೇಕೆಂದು ನಾನು ಸರ್ಕಾರವನ್ನು ಕೇಳುತ್ತೇನೆ.

ಡಾ॥ ಹೆಚ್.ಸಿ. ಮಹದೇವಪ್ಪ (ಮಾನ್ಯ ವೈದ್ಯಕೀಯ ಶಿಕ್ಷಣ ಮಂತ್ರಿಗಳು) : ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ (ಕಿಮ್ಸ್)ಯ ನೌಕರರು ದಿನಾಂಕ 29-7-1997 ರಿಂದ ಸತ್ಯಾಗ್ರಹ ನಡೆಸುತ್ತಿದ್ದಾರೆ. ಅವರ ಬೇಡಿಕೆಗಳು ಈ ಕೆಳಗಿನಂತಿವೆ :

1) ಅವರ ಸಂಬಳ ಟ್ರೆಜರಿ ಮುಖಾಂತರವಾಗಬೇಕು

2) ಅವರನ್ನು ಕಿಮ್ಸ್ ಸಂಸ್ಥೆಗೆ ನಿಯೋಜಿಸಬೇಕು

3) ಕಿಮ್ಸ್ ಬೈಲಾಗಳು ತಿದ್ದುಪಡಿ ಮಾಡಬೇಕು

ಈ ಸಂಬಂಧದಲ್ಲಿ ಸನ್ಮಾನ್ಯ ಸಹಕಾರ ಮಂತ್ರಿಗಳಾದ ಶ್ರೀ ಎಸ್.ಎಸ್. ಪಾಟೀಲ್ ಮತ್ತು ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರಾದ ಡಾ.ಶಂಕರ್ ನಾಯಕ್ ಅವರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಾರ್ಯದರ್ಶಿಗಳು, ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ನಿರ್ದೇಶಕರು, ವೈದ್ಯಕೀಯ ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸರ್ಕಾರದ ಉಪಕಾರ್ಯದರ್ಶಿ (ವೈ.ಶಿ.), ನಿರ್ದೇಶಕರು, ಕಿಮ್ಸ್, ನೌಕರರ ಸಂಘದ ಪ್ರತಿನಿಧಿಗಳು ಇವರೊಂದಿಗೆ ಕೂಲಂಕಷವಾಗಿ ಚರ್ಚಿಸಿ ಈ ಕೆಳಕಂಡ ನಿರ್ಧಾರಗಳನ್ನು ಕೈಗೊಂಡಿದ್ದಾರೆ.

1) ಕಿಮ್ಸ್ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಸರ್ಕಾರಿ ನೌಕರರನ್ನು 3 ತಿಂಗಳ ಅವಧಿಗೆ ಕಿಮ್ಸ್ ಸಂಸ್ಥೆಗೆ ನಿಯೋಜಿಸಲಾಗುವುದು. ಈ ಬಗ್ಗೆ ಸರ್ಕಾರಿ ಆದೇಶವನ್ನು ಹೊರಡಿಸಲಾಗುವುದು.

2) ಈ ಅವಧಿಯಲ್ಲಿ ಅವರಿಂದ ಕಿಮ್ಸ್ ಸಂಸ್ಥೆಗೆ ಸೇರುವಿರೋ ಇಲ್ಲವೋ ಎಂಬ ಇಚ್ಛಾಪತ್ರವನ್ನು ಪಡೆಯಲಾಗುವುದು.

3) ಇಚ್ಛೆ ವ್ಯಕ್ತಪಡಿಸಿದ ನೌಕರರನ್ನು ಖಾಯಂ ಆಗಿ ಕಿಮ್ಸ್ ಸಂಸ್ಥೆಯಲ್ಲಿ ವಿಲೀನ ಗೊಳಿಸಲಾಗುವುದು. ವಿಲೀನದ ಬಗ್ಗೆ ಸೂಕ್ತ ನಿಯಮಾವಳಿಗಳನ್ನು ನೀಡಲಾಗುವುದು.

4) ಇಚ್ಛೆ ಇಲ್ಲದ ನೌಕರರನ್ನು ಮಾತೃ ಇಲಾಖೆಯಾದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಮರಳಿ ಕಳುಹಿಸಲಾಗುವುದು.

5) ನಿಯೋಜನೆ ಅವಧಿಯಲ್ಲಿ ಅವರು ಕಿಮ್ಸ್ ಸಂಸ್ಥೆಯಿಂದ ಸಂಬಳ ಪಡೆಯತಕ್ಕದ್ದು ಹಾಗೂ ಈ ಅವಧಿಯಲ್ಲಿ ಅವರು ಸರ್ಕಾರಿ ಸೇವೆಯ ಎಲ್ಲಾ ಸೌಲಭ್ಯ ಮತ್ತು ಭಾದ್ಯತೆಗಳನ್ನು ಹೊಂದಿರುತ್ತಾರೆ.

6) ಕಿಮ್ಸ್ ಆಸ್ಪತ್ರೆ ಮತ್ತು ವಿದ್ಯಾಲಯದ ಗುಣಮಟ್ಟವನ್ನು ಉತ್ತಮಗೊಳಿಸುವ ಬಗ್ಗೆ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ಅತೀ ಜರೂರಾಗಿ ತರಲಾಗುವುದು.

5.10 ಪಿಎಂ

ಅಧ್ಯಕ್ಷರು : ಶ್ರೀ ಸಿ.ಆರ್ ಸಗೀರ್ ಅಹಮದ್ - ಆಬ್ಸೆಂಟ್.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅಧ್ಯಕ್ಷರೇ, ಆಗಸ್ಟ್ 15ರಂದು ಇಡೀ ದೇಶವೆಲ್ಲ ಸ್ವಾತಂತ್ರ್ಯದ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿದೆ. ಆದರೆ ನನಗೆ ಬಂದಿರುವ ಮಾಹಿತಿ ಪ್ರಕಾರ ರಾಜ್ಯದಲ್ಲಿರುವ ಸ್ಕೂಲ್‌ಗಳು 15 ನೇ ತಾರೀಖು ವರಮಹಾಲಕ್ಷ್ಮಿ ಹಬ್ಬ ಬಂದಿರುವುದರಿಂದ 14ನೇ ತಾರೀಖು ಸ್ವಾತಂತ್ರ್ಯ ದಿನಾಚರಣೆ ಆಚರಿಸುವುದಾಗಿ ಮಕ್ಕಳಿಗೆ ತಿಳಿಸಿದ್ದಾರೆ. 15 ರಂದು ಸಾರ್ವತ್ರಿಕ ರಜೆ ಕೊಡುವರಂತೆ. ಸರ್ಕಾರ ಇದಕ್ಕೆ ಅವಕಾಶ ಕೊಡಬಾರದು ತಕ್ಷಣ ಸಂಬಂಧಪಟ್ಟ ಶಿಕ್ಷಣ ಸಚಿವರು 15 ರಂದೇ ಸ್ವಾತಂತ್ರ್ಯ ದಿನಾಚರಣೆ ನಡೆಸುವಂತೆ ಎಲ್ಲ ವಿದ್ಯಾಶಾಲೆಗಳಿಗೆ ಆದೇಶ ಹೊರಡಿಸಬೇಕು.

ಶ್ರೀ ಎಚ್.ಜಿ. ಗೋವಿಂದೇಗೌಡ : ಇದರ ಬಗ್ಗೆ ನಮ್ಮ ಅಧಿಕಾರಿಗಳ ಜೊತೆ ಚರ್ಚಿಸಿ ವಿಮರ್ಶೆ ಮಾಡುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ತಾವು ಇದರ ಬಗ್ಗೆ ಉದಾಸೀನ ಮಾಡಬಾರದು.

ಅಧ್ಯಕ್ಷರು : ಅವರು ಉದಾಸೀನ ಮಾಡುವುದಿಲ್ಲ, 15ರಂದೇ ಸ್ವಾತಂತ್ರ್ಯ ದಿನ ಆಚರಿಸಬೇಕೆಂದು ಆದೇಶ ಹೊರಡಿಸುತ್ತಾರೆ, ಹಾಗೂ ಯಾರಾದರೂ ತಪ್ಪಿತಸ್ಥರಿದ್ದರೆ ಅವರ ವಿರುದ್ಧ ಕ್ರಮ ಜರುಗಿಸುತ್ತಾರೆ. ಅದಕ್ಕೇನು ತೊಂದರೆ ಇಲ್ಲ.

ಶ್ರೀ ವಸಂತ ವಿ ಸಾಲಿಯಾನ : ಅಧ್ಯಕ್ಷರೇ, ಆರಾಧನ ವಿಷಯದ ಬಗ್ಗೆ ರೈಸ್ ಮಾಡುತ್ತಿದ್ದೇನೆ, ಇದು ಎರಡನೇ ಬಾರಿ. ಆದರೂ ಈಗ ರೆವಿನ್ಯೂ ಸಚಿವರಿಲ್ಲ.

ಅಧ್ಯಕ್ಷರು : ಲಾಸ್ಟ್‌ಟೈಮೇ ರೆವಿನ್ಯೂ ಸಚಿವರಿಗೆ ರಿಕ್ವೆಸ್ಟ್ ಮಾಡಿಕೊಂಡಿದ್ದೆ. ಅವರು ಕೌನ್ಸಿಲ್‌ನಲ್ಲಿರುತ್ತಾರೆ ಎಂದು ನಾವು ತಿಳಿದುಕೊಳ್ಳುತ್ತೇವೆ ಅಸೆಂಬ್ಲಿಯಲ್ಲಿರುತ್ತಾರೆ ಎಂದು ಅವರು ತಿಳಿದು ಕೊಳ್ಳುತ್ತಾರೆ ಅವರು ಎಲ್ಲಿರುತ್ತಾರೋ ಗೊತ್ತಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಮ್ಮದೊಂದು ಸಲಹೆ ಇದೆ, ತಮ್ಮದೇ ಆದಂತಹ ಗುಪ್ತದಳ ವ್ಯವಸ್ಥೆ ಮಾಡಿ.

ಅಧ್ಯಕ್ಷರು : ಸಾಲಿಯಾನ ಅವರೇ ನಾಳೆ ಇದನ್ನು ತೆಗೆದುಕೊಳ್ಳೋಣ, ಸಹಕರಿಸಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಅಧ್ಯಕ್ಷರೇ, ಹೋದವರ್ಷ ಕ್ರೀಡಾಪಟುಗಳಿಗೆ ಏಶ್ಯನ್ ಲೆವೆಲ್‌ನಲ್ಲಿ ಸ್ಪರ್ಧಿಸಿ ಗೆದ್ದಿರುವ ಗೋಲ್ಡ್‌ಮೆಡಲಿಸ್ಟ್, ನ್ಯಾಷನಲ್ ಲೆವೆಲ್‌ನವರು, ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಸ್ಪರ್ಧಿಸಿರುವವರು, ಸ್ಟೇಟ್‌ಲೆವೆಲ್‌ನಲ್ಲಿ ಸ್ಪರ್ಧಿಸಿರುವವರು ಯಾರ್ಯಾರು ಎಂದು ಬೈಫರ್ಕೇಟ್ ಮಾಡಿ ವೈಜ್ಞಾನಿಕವಾಗಿ ಸಿಇಟಿಯಲ್ಲಿ 15 ರಿಂದ 20 ಸೀಟು ಇರಬೇಕು ಎಂದು ಹೇಳಿ ಆದ್ಯತೆ ಮೇಲೆ ಕ್ರೀಡೆಯವರಿಗೆ ಕೊಟ್ಟಿದ್ದರು. ಅದು ಹೋದ ಸಲ. ಈ ಸಾರಿ, ನಾನು ಕ್ರೀಡಾಸಚಿವರನ್ನು ಕೇಳಿದೆ ನಿಮ್ಮ ಗಮನಕ್ಕೆ ಬಂದಿದೆಯಾ ಎಂದು ಇಲ್ಲ, ನಾನು ಮುಖ್ಯಮಂತ್ರಿಗಳ ಜೊತೆ ಮಾತನಾಡಬೇಕು ಅಂತಿದ್ದೇನೆ ಎಂದರು. ಈಗ ಬದಲಾವಣೆ ಮಾಡಿದ್ದಾರೆ.

``Candidates who have represented the country at international games of sports or who have represented the Karnataka state in the national level events and games and sports listed in the II schedule during the five years period be tween 8th & 12th standards."

ಯಾವುದಕ್ಕಾದರೂ ಸ್ಪರ್ಧಿಸಿರಬಹುದು ಈಕ್ವಲ್ ಸ್ಟೇಟಸ್ ಅದು. ಕಾಮನ್‌ವೆಲ್ತ್ ಸ್ಪರ್ಧಿ ಮತ್ತು ರಾಜ್ಯಮಟ್ಟದಲ್ಲಿ ಸ್ಪರ್ಧಿಸಿರುವವನು ಇಬ್ಬರೂ ಸಮಾನ, ಅವನು ಮೂರು ಚಿನ್ನದ ಪದಕ ತಗೊಂಡಿದ್ದರು ಇವನು ಒಂದು ಚಿನ್ನದ ಪದಕ ತಗೊಂಡಿದ್ದರೂ ಸಮಾನರೇ. ಎಲ್ಲರೂ ಸಮಾನರೆಂದು ಪರಿಗಣಿಸಿದ್ದರು ಆದ್ದರಿಂದ, ಇದಕ್ಕೆ ಯಾವ ಕ್ರೀಡಾರಂಗದ ವಿಚಾರದ ಮೇಲೆ ತೀರ್ಮಾನ ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು) : ಇವತ್ತು ಮಧ್ಯಾಹ್ನ ಅಧಿಕಾರಿಗಳು ಸಿಗಲಿಲ್ಲ, ಒಂದೆರಡು ದಿನದಲ್ಲಿ ವಿವರವಾದ ಮಾಹಿತಿಯನ್ನು ಕೊಡುತ್ತೇನೆ. ಏನಾದರೂ ಅನ್ಯಾಯವಾಗಿದ್ದರೆ ಸರಿಪಡಿಸುತ್ತೇನೆ.

ಮಧುರೆಯಿಂದ ಬೆಂಗಳೂರು ಹತ್ತಿರ ಬಂದಾಗ ರೈಲಿನ ಬೋಗಿ ಸ್ಫೋಟಗೊಂಡಿರುವುದು.

ಶ್ರೀ ಟಿ.ಬಿ. ಜಯಚಂದ್ರ : ಅಧ್ಯಕ್ಷರೇ, ಸೋಮವಾರ ಬೆಳಿಗ್ಗೆ6.15 ರಲ್ಲಿ ಮಧುರೆಯಿಂದ ಬಂದ ರೈಲು ಬೆಂಗಳೂರಿಗೆ ಹತ್ತಿರ ಬಂದ ಸಂದರ್ಭದಲ್ಲಿ ಒಂದು ಬೋಗಿಯಲ್ಲಿ ಸ್ಫೋಟನೆಯಿಂದ ಜಖಂ ಆಗಿ, 19 ಜನರಿಗೆ ಗಾಯಗಳಾಗಿರುವುದು ಮತ್ತು ಬಂಗಾರಪೇಟೆ ಆಸ್ಪತ್ರೆಯಲ್ಲಿ ಅವರೆಲ್ಲ ಉಪಚಾರ ಪಡೆದಿದ್ದಾರೆ. ಇತ್ತೀಚೆಗೆ ರೈಲಿನಲ್ಲಿ ಆಗುವ ದುರುಂತಗಳನ್ನು ನೆನೆಸಿಕೊಂಡಾಗ ಜನರಿಗೆ ಯಾವರೀತಿ ಪ್ರಯಾಣ ಮಾಡಬೇಕೋ ಎಂಬ ಅನುಮಾನ ಬಂದಿರುವ ಸಂದರ್ಭದಲ್ಲಿ ಇದರಲ್ಲಿ ಯಾರ ಕೈವಾಡ ಇರಬಹುದು, ಮಧುರೆಯಿಂದ ಇದು ಬೆಂಗಳೂರಿಗೆ ಬರಬೇಕಾದರೆ ಅದು ಎಲ್‌ಟಿಟಿಇ ಅಥವಾ ನಕ್ಸಲೀಯರ ಕೈವಾಡವೋ ಎಂದು ಒಂದು ಅನುಮಾನ ಇದೆ. ಯಾವರೀತಿ ಆಯಿತು ಎಂದು ಪತ್ರಿಕೆಯಲ್ಲೇನು ವರದಿಯಾಗಿಲ್ಲ. ಅದಕ್ಕೆ ಏನಾದರೂ ಮಾಹಿತಿ ಕೊಟ್ಟರೆ ಸಾರ್ವಜನಿಕರಿಗೆ ಒಳ್ಳೆಯದು.

ಶ್ರೀ ವಾಟಾಳ್ ನಾಗರಾಜ್ : ಕೋಲಾರ ಸಮೀಪ ರೈಲಿನಲ್ಲಿ ಸ್ಫೋಟ, 16 ಜನರಿಗೆ ಗಾಯ ಈ ಬಗ್ಗೆ ಏನು ನಡೆದಿದೆ ಹೇಳಿ ಸ್ವಾಮಿ.

ಶ್ರೀ ಆರ್. ರೋಶನ್ ಬೇಗ್ : ಅಧ್ಯಕ್ಷರೇ, ನಿನ್ನೆ ಬೆಳಿಗ್ಗೆ ಆ ಟ್ರೇನ್‌ನಲ್ಲಿ ಒಂದು ಬಾಂಬ್ ಸ್ಫೋಟಿಸಿತು ಎಂಬ ಸುದ್ದಿ ಬಂದ ತಕ್ಷಣವೇ 6.30 ಕ್ಕೆ ಲೋಕಲ್ ಎಸ್‌ಪಿ, ಡಿಐಜಿ ಉಳಿದ ಸೀನಿಯರ್ ಆಫೀಸರ್ಸ್ ಎಲ್ಲಿ ಹೋಗಿ ಪರಿಶೀಲನೆ ಮಾಡಿದ್ದಾರೆ. ಸ್ಫೋಟಿಸಿರುವುದು it is not of a serious nature. ಗಾಯವಾಗಿದ್ದ 18 ಜನ ಅಲ್ಲಿಂದು ನಡೆದು ಕಾರ್‌ನಲ್ಲಿ ಕೂತು ಆಸ್ಪತ್ರೆಗೆ